Regd. No. M 1299 SATYAVADI Founded 1917

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 30 ಸಂಚಿಕೆ 70] ಸೋಮವಾರ 11—11—46 [ಬಿಡಿ ಪ್ರತಿ 6 ಪೈ

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ — ಶಾರೀರಿಕ ಸಾಂಪತ್ತಿಕ ಸ್ಥಿತಿಗಳು, ಸಾಧಾರಣವಾಗಿರುತ್ತವೆ. ವ್ಯವಹಾರದಲ್ಲಿ ಜಾಗರೂಕತೆ ಆವಶ್ಯಕ.

ವೃಷಭ — ಧನಲಾಭವುಂಟು ಆರೋಗ್ಯವುಂಟು. ವ್ಯವಹಾರದಲ್ಲಿ ಆನಂದವುಂಟು.

ಮಿಥುನ — ಸರ್ವತೋಮುಖವಾಗಿ ಅನುಕೂಲವಾಗಿರುವ ವಾರವಿದು.

ಕಟಕ — ಖರ್ಚು ಹೆಚ್ಚು ಆರೋಗ್ಯಕ್ಕೆ ಧಕ್ಕೆ ಒರುತ್ತದೆ. ಮನೆಯಲ್ಲಿ ಕಚ್ಚಾಟಗಳು.

ಸಿಂಹ — ವ್ಯವಹಾರದಲ್ಲಿ ಜಯವುಂಟು. ಆರೋಗ್ಯವುಂಟು, ಆನಂದವುಂಟು, ಧಾರ್ಮಿಕ ಕಾರ್ಯಗಳಲ್ಲಿ ಭಿ ಅರುಚಿ ಇರುತ್ತದೆ.

ಕನ್ಯ — ಸಂತೋಷಕರವಾದ ವಾರವಲ್ಲ. ಎಲ್ಲಾ ಕಾರ್ಯಗಳಲ್ಲಿಯೂ ಅಡಚಣೆಗಳು ಬರುತ್ತಿರುತ್ತವೆ.

ತುಲ — ಶಾರೀರಿಕ ಮಾನಸಿಕ ಆರ್ಥಿಕ ಸ್ಥಿತಿಗಳು ಉತ್ತಮವಾಗಿರುವದಿಲ್ಲ ಪ್ರಿಯಜನ ಚಿಂತೆ.

ವೃಶ್ಚಿಕ — ವ್ಯವಹಾರಿಕ ಶಾರೀರಿಕ ಆರ್ಥಿಕ ಸ್ಥಿತಿಗಳು ಶುಭವಾಗಿಲ್ಲ ಹೆಚ್ಚು ಜಾಗರೂಕತೆಯಿಂದಿರಿ

ಧನಸ್ಸು — ಎಲ್ಲಾ ವಿಷಯಗಳಲ್ಲಿಯೂ ಮುಂಜರಿಯುವಿರಿ ಭಯ ಪಡಬೇಡಿ,

ಮಕರ — ಮನಸ್ಸು ಸಮಾಧಾನವಾಗಿರುವದಿಲ್ಲ. ಆರೋಗ್ಯವೂ ಚನ್ನಾಗಿರುವುದಿಲ್ಲ, ವ್ಯವಹಾರದಲ್ಲಿ ದುಷ್ಟರ ಸಹವಾಸದಿಂದ ಕಷ್ಟಗಳು ಒಂದೊಂದಗಬಹುದು.

ಕುಂಭ — ಆರೋಗ್ಯ ಧನಲಾಭ ಚಿತ್ತ ಹರ್ಷತೆ ಇವುಗಳಲ್ಲದೆ ಸಂತೋಷ ನೆಲಿಸಿರುತ್ತದೆ.

ಪ್ರೊಫೇಸರರ ಹರತಾಳ

ಲಾಹೋರ ಡಿ. ಏ. ವಿ. ಕಾಲೇಜಿನ ಪ್ರೊಫೆಸರು ಮೇನೇಜಿಂಗ ಕಮಿಟಿಯ ವರ್ತನೆಯ ಬಗ್ಗೆ ಮತ್ತು ಸಂಬಳ ಹುದ್ದೆ ಮತ್ತು ಭತ್ಯೆಗಳ ತಮ್ಮ ಬೇಡಿಕೆಗಳು ಮಾನ್ಯ ಮಾಡಲ್ಪಡದ್ದರಿಂದ ಒಂದು ದಿವಸ ಹರತಾಳ ಆಚರಿಸಿದರು.

ವಿಜಾಪುರದಲ್ಲಿ ಕಳ್ಳಪೇಟೆಯ ಶೋಧ

ಇಲ್ಲಿಯ ಸಿಂಗರ ಕಂಪನಿಯ ಅಸಿಸ್ಟಂಟ ಮ್ಯಾನೇಜರಾದ ಶ್ರೀ ರಾಮಕೃಷ್ಣ ಶೆಟ್ಟಿ ಇವರು ಹೆಚ್ಚಿನ ಬೆಲೆ ತಕ್ಕೊಂಡು ಯಂತ್ರದ ಸೂಜಿಗಳನ್ನು ಮಾರಿದ್ದಕ್ಕೆ ಇಲ್ಲಿಯ ಲಂಚ ನಿರ್ಮೂಲ ಖಾತೆಯ ಸಬ್ ಇನ್ಸ್‌ಪೆಕ್ಟರರೂ ಜಿಲ್ಲಾ. ಕ. ಯ. ಸಹ ಕಾರ್ಯದರ್ಶಿಗಳೂ ಕಳ್ಳ ಪೇಟೆಯನ್ನು ಹಿಡಿದು ಮಾಲು ಜಪ್ತಮಾಡಿ ಪಂಚನಾಮಾ ಮಾಡಿಕೊಂಡು ಹೋದರು.

ಭಾರತದ ಶ್ವೇತ ಸಾಹೇಬರು

ಲಂಡನ್ ನ 7 — ರೇಜಿನಾಲ್ಡ್ ರೇಲಾಂಡ್ಸರು 'ವೈಟ್ ಸಾಹಿಬ್ ಆಫ್ ಇಂಡಿಯಾ' ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಬ್ರಿಟನ್ನಿನ ದುರಾಶೆ ಕ್ರೌರ್ಯ ಮತ್ತು ಕೆಟ್ಟಚಟಗಳ ಒಗ್ಗೆ ಹೇರಳವಾದ ವಿವರಣೆಗಳಿವೆ ಈ ಪುಸ್ತಕವನ್ನು ಪಾರ್ಲಿಮೆಂಟಿನಲ್ಲಿ ಲೇಬರ್ ಮೆಂಬರಾದ ವೇಜ್‌ವುಡ್ ರೋವಾಟರು ಏನರ್ಪಿಸುತ್ತ, ಬ್ರಿಟಿಷರು ಭಾರತೀಯರು ಉದ್ಧಾರಕ್ಕಾಗಿ ಭಾರತನ್ನು ಆಳಿದರೆಂದು ಇನ್ನೂ ಯಾರಾದರೂ ನಂಬಿರುವುದಾದರೆ ಅಂಧವರಿಗೆ ಈ ಪುಸ್ತಕವು ಒಳ್ಳೆ ಭೇದಿ ಔಷಧ ಎಂದು ಹೇಳಿದ್ದಾರೆ.

ವಿಮಾನ — ಕಷ್ಟವು ಕಂಡ ಬಂದರೂ ಧೈರ್ಯದಿಂದಿರಿ. ಆರೋಗ್ಯವು ಅಷ್ಟು ಉತ್ತಮವಿಂದು, ಧನಲಾಭವೂ ಸಾಮಾನ್ಯವೇ ಚಿತ್ತ ಚಾಂಚಲ್ಯತೆಯು ಹೆಚ್ಚು.

ಯಾತ್ರಿಕರ ಮೇಲೆ ಘೋರ ಅತ್ಯಾಚಾರ

ಭಾರತಕ್ಕೆ ಬೆಳ್ಳಿ

ಬೊಂಬಾಯಿ ನ 8— 3230 ಬಾರು ಬೆಳ್ಳಿಯು ಸಂಯುಕ್ತ ರಾಷ್ಟ್ರಗಳಿಂದ ಕಳೆದವಾರ ಬಂದಿದೆ.

ಅಮೆರಿಕಾದಿಂದ ಭಂಗಾರ

ಕರಾಚಿ ನ 8 — ಅಮೇರಿಕಾದಿಂದ ವಿಮಾನದಲ್ಲಿ 700 ಪೌಂಡು ಭಂಗಾರ ಬಂದಿದೆ.

ಕಾಂಗ್ರೆಸ್ ಅಧ್ಯಕ್ಷರು

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಸಿ ರೆಡ್ಡಿಯವರೂ ನೂಚಿ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಬೆಂಗಳೂರಿನಿಂದ ಮಧ್ಯಾಹ್ನ ಮೈಲಿನಲ್ಲಿ ಬಂದರು. ಸ್ಟೇಷನಿನಲ್ಲಿ ಅವರನ್ನು ರಾಜಧಾನಿಯ ಕಾಂಗ್ರೆಸ್ ಮುಖಂಡರು ಎದುರುಗೊಂಡು ಸ್ವಾಗತಿಸಿ ಹಾರ ತುರಾಯಿ ಅರ್ಪಿಸಿದರು.

ಕಳೆದ ಶನಿವಾರ ಪತ್ರಿಕೆಯಲ್ಲಿ ಪೌರ ಸಭೆಗೆ ಜೀವದಾನ ಕೊಡಲಾಗಿದೆ ಎಂದು ಪ್ರಕಟಿಸಿದ ವರ್ತಮಾನವು ಮದರಾಸಿನ ಮೇಲ್ ಪತ್ರಿಕೆಯಿಂದ ಎತ್ತಿ ಬರೆದುದಾಗಿದೆ

ಯಾತ್ರಿಕರ ಮೇಲೆ ಭೀಕರ ಅತ್ಯಾಚಾರ

ನವದೆಹಲಿ ನ 9 — ವಿಾರತ್ತಿಗೆ 18 ಮೈಲಿ ದೂರದಲ್ಲಿರುವ ಹಹಜಹರ್ ಪುರದಲ್ಲಿ ಗಲಭೆಗಾರರಿಂದ ನಡೆದ ಭೀಕರ ಅತ್ಯಾಚಾರದಿಂದ 45 ಮಂದಿ ಯಾತ್ರಿಕರು ಮಡಿದರೆಂದೂ 25 ನುಂದಿಗೆ ಜಖಂ ಆಗಿರುವುದೆಂದೂ ವರದಿಯಾಗಿದೆ.

ಎಲ್ಲಾ ಕಂಟ್ರೋಲ್ ವಜಾ

ವಾಷಿಂಗ್‌ಟನ್ ನ 8 — ಟ್ರೂಮನ್ನರ ಮಂತ್ರಿಮಂಡಲ ಸಭೆ ನಡೆದು ಈಗ ಅಮೆರಿಕಾದಲ್ಲಿ ಪದಾರ್ಥಗಳ ಮೇಲೆ ಜಾರಿ ಇರುವ ಕಂಟ್ರೋಲನ್ನೆಲ್ಲಾ ವಜಾ ಮಾಡಲು ಯೋಚಿಸಿರುವರು.

ಬಿಹಾರಿನ ಗಲಭೆ ನಿಂತಿತು

ಪಾಟ್ನಾ ನ 9 — ಮಿಲಿಟರಿಯವರು ಹೊರಡಿಸಿರುವ ಒಂದು ಪ್ರಕಟಣೆ ಪತ್ರದಲ್ಲಿ ಬೀಹಾರಿನಲ್ಲಿನ ಕೋಮುವಾರು ಗಲಭೆ ಹುಚ್ಚು ಅಡಗಿರುವುದೆಂದೂ ಜನರು ಮನೆಗಳಿಗೆ ವಾಪಸ್ ಬರುತ್ತಿರುವರೆಂದೂ ತಿಳಿಸಿದ್ದಾರೆ.

ವಾರದವಾರ್ತೆ

ಸದ್ಯ ಪರಿಸ್ಥಿತಿಯಲ್ಲಿ ಚರ್ಚಿಲ್ಲರಂಥ ಯುದ್ಧ ಪ್ರಚೋದಕರು ಜಗತ್ತಿನ ಶಾಂತಿಗೆ ಭಂಗ ತರುವರೆಂದೂ ಆದ್ದರಿಂದ ಅಂಥವರನ್ನು ಕೂಡಲೇ ಬಯಲಿಗೆಳೆದು ನಿರ್ಬಂಧಿಸಬೇಕೆಂದೂ ಮಾರ್ಶಲ್ ಸ್ಮಾಲಿನರು ಅವರಿಗೆ ಕೇಳಲಾದ ಪ್ರಶ್ನೆಗಳಿಗೆ ಉತ್ತರಿಸಿದರು.

ಂ ಂ

ಜಪಾನಕ್ಕೆ ಕಳಿಸಬೇಕೆಂದು ಮುಂಜೂರಾದ ಆದರೆ ಈಗ ತಡೆಹಿಡಿಯಲ್ಪಟ್ಟ 3 ಲಕ್ಷ ಟನ್ ಗೋಧಿಯು ಹಿಂದೂಸ್ತಾನಕ್ಕೆ ದೊರೆಯಬೇಕೆಂದು ಸಂಯುಕ್ತ ರಾಷ್ಟ್ರಕ್ಕೆ ಹಿಂದೀ – ಇಂಗ್ಲೀಷ್ ಸಂಯುಕ್ತ ಶಿಷ್ಟ ಮಂಡಲವು ಶಿಫಾರಸು ಮಾಡಬೇಕೆಂದು ಅಮೇರಿಕೆಗೆ ಕಳಿಸಲ್ಪಟ್ಟ ಹಿಂದೀ ಆಹಾರ ಶಿಷ್ಟ ಮಂಡಳದ ಧುರೀಣರಾದ ದಿವಾನ ಚಮನಲಾಲರು ಕೇಳುವರೆಂದು ತಿಳಿಯುತ್ತದೆ

ಂ ಂ

ಬರ್ಲಿನ್ ನ 2 — 77 ಸಾವಿರ ಆತ್ಮಹತ್ಯ ವಿಷ ಶೀಷೆಗಳು ಇಲ್ಲಿ ಒಬ್ಬ ನಾಜಿ ಹಕ್ತಿರನಿಕ್ಕಿದೆ.

ಂ ಂ

ಲಂಡನ್ ನ 1 — ಭಂಗಾರವನ್ನು ನಾನಾ ವರ್ಣಕ್ಕೆ ಪರಿವರ್ತಿಸುವುದನ್ನು ಒಬ್ಬ ಬ್ರಿಟಿಷು ಕಲಾ ವಿದುರನು ಪತ್ತೆ ಮಾಡಿರುವನು.

ಂ ಂ

ಮದರಾಸ್ ನ 4 — ಪೆಟ್ರೋಲಿನ ಮೇಲಿನ ಸುಂಕವನ್ನು ಮದರಾಸು ಸರಕಾರವು ಎಷ್ಟರಮಟ್ಟಿಗೆ ಮಾಡುವ ಯೋಚನೆಯಲ್ಲಿರುವದು.

ಂ ಂ

ಮುಸ್ಲಿಂ ಸಂತಾನಗಳನ್ನು ಪಾಕೀ ಸ್ಥಾನಕ್ಕೆ ಪಳಗಿಸಿರೆಂದೂ ಜಿನ್ನರು ಡೆಲ್ಲಿಯಲ್ಲಿನ ಆಂಗ್ಲೋ ಅರಾಬಿಕ್ ಕಾಲೇಜಿನ ಸ್ಟ್ರೀಯರ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿದರು.

ಂ ಂ

ಬೆಂಗಳೂರು, ನ 4 — ಮೈಸೂರಿನ ಎಲ್ಲಾ ಪಕ್ಷಗಳೂ ಶ್ರೀಮನ್ಮಹಾರಾಜರ ಕೃಪಾಶ್ರಯದಲ್ಲಿ ಪ್ರಜಾಸರ್ಕಾರ ಸ್ಥಾಪನೆ ಮಾಡಲು ಒಂದೇ ಭಾವನೆಯಿಟ್ಟು ಗಮನ ಕೂಡಬೇಕು — ಎಂಬುದಾಗಿ ಕಾಂಗ್ರೆಸ್ ಆರನೆ ಅಧಿವೇಶನದ ಅಧ್ಯಕ್ಷ ಶ್ರೀ ರೆಡ್ಡಿಯವರು ತಮ್ಮ ಮುಕ್ತಾಯ ಭಾಷಣದಲ್ಲಿ ತಿಳಿಸಿದ್ದಾರೆ.

ಂ ಂ

ಕಲ್ಲಿಕೋಟೆ ನ 2 — ಇಲ್ಲಿ ಟೌನ್ ಹಾಲಿನಲ್ಲಿ ಎಲ್ಲಾ ಪಕ್ಷಗಳ ಸಮ್ಮೇಳನ ನಡೆದು ಮಲಬಾರಿನಲ್ಲಿ 1947 ನೇ ಜನವರಿಯಿಂದ ದೇವಾಲಯ ಪ್ರವೇಶ ಸತ್ಯಾಗ್ರಹ ನಡೆಸಲು ತೀರ್ಮಾನಿಸಿದರು.

ಗೋವಾ ಸರಕಾರದ ವಿಚಿತ್ರ ವರ್ತನೆ

ಮಡಗಾವ ತಾ 25 — ಇಲ್ಲಿ ನರಕ ಚತುರ್ದಶಿ ದಿನ ಪ್ರಭಾತ ಫೇರಿ ಹೊರಟಿತ್ತು. ಆ ಹೊತ್ತಿನಲ್ಲಿ ಮೂರು ಜನರು ಬಂಧಿಸಲ್ಪಟ್ಟರು. ಅವರೆಲ್ಲರನ್ನೂ ಪೋಲಿಸ ಸ್ಟೇಶನಿಗೆ ಕರೆದುಕೊಂಡು ಹೋಗಿ ಅವರ ತಲೆ, ಮಾಸೆ ಗಡ್ಡ ಮತ್ತು ಹುಬ್ಬುಗಳನ್ನು ಬೋಳಿಸಿ ಪ್ರತಿಯೊಬ್ಬರಿಗೆ 60 ರಿಂದ 90 ರ ವರೆಗೆ ಪೆಟ್ಟು ಕೊಟ್ಟರು. ಆ ಮೇಲೆ ಇಡೀ ದಿವಸ ಆಸ್ಥ ನೀರಿಲ್ಲದೆ ಇಟ್ಟು ಮರುದಿನ ಬೆಳಿಗ್ಗೆ ಅವರನ್ನು ಬಿಟ್ಟು ಬಿಟ್ಟರು. ಅವರ ಮುಖವು ಹೊಲಸು ಮತ್ತು ವಿಕಾರವಾಗಿ ಕಾಣುತ್ತಿದ್ದು ಕೈಗಳೆಲ್ಲವೂ ಊದಿಹೋಗಿವೆ. ಈ ಅತ್ಯಾಚಾರದ ಬಗ್ಗೆ ಪಿರ್ಯಾದಿ ಕೊಡಲು ಹೋದರೆ ನ್ಯಾಯಾಧೀಶರು ಪಿರ್ಯಾದನ್ನು ಗಣನೆಗೆ ತರಲಿಲ್ಲ. ಈ ಹೊಲಸು ಘಟನೆಯು ಬಗ್ಗೆ ಜನರಲ್ಲಿ ದ್ವೇಷ ಹಾಗೂ ಹೆದರಿಕೆ ಉತ್ಪನ್ನವಾಗಿದೆ. ಪೊರ್ತುಗಲ್ಲಿನಿಂದ ಮೊನ್ನೆ 600 ಜನ ಸೈನಿಕರ ಹಡಗೊಂದು ಮಾರ್ಮ ಗೋವಾಕ್ಕೆ ಬಂದಿರುತ್ತದೆ. ಸತ್ಯಾಗ್ರಹಿಗಳನ್ನು ತಿಕ್ಕಿಸುವ ಮಹತ್ಕಾದ ಕೆಲಸವನ್ನು ಇಲ್ಲಿಯ ಮುಸಲ್ಮಾನ ಪೋಲೀಸರಿಗೆ ಮತ್ತು ಪೋಲೀಸ ಉನ್ನತ ಅಧಿಕಾರಿಗಳ ಕಡೆಗೆ ಒಪ್ಪಿಸಿರುತ್ತದೆ. ಇದನ್ನು ನಿಷೇಧಿಸುವುದರ ಸಲುವಾಗಿ ಇಲ್ಲಿಯ ವ್ಯಾಪಾರಸ್ಥರು ಲಕ್ಷ್ಮಿಯ ಪೂಜೆಯನ್ನು ಯಾವ ತರದ ಅಡಂಬರವಿಲ್ಲದೆ ಆಚರಿಸಿದರು. ಆ ದಿವಸ ಸರಕಾರದವರು ವಿದ್ಯುದ್ದೀಪಗಳನ್ನು ಅರಿಸಿ ನಗರವೆಲ್ಲವನ್ನು ಗಾಢಾಂಧಕಾರದಲ್ಲಿ ನೂಕಿದ್ದರು. ಗೋವಯ ಜನರು ತಮ್ಮ ನೆರನಾಡಿನ ಬಾಂಧವರ ಕಡೆಗೆ ಸತ್ಯಾಗ್ರಹಿಗಳ ಆಗಮನದ ಸಲುವಾಗಿ ಅತುರದಿಂದ ನಿರೀಕ್ಷಿಸುತ್ತಿದ್ದಾರೆ. (ನ. ಭಾ.)

ಪೊರದೇಶೀಯರ ಮೇಲೆ ಕಂದಾಯ ಹಾಕುವ ಯೋಜನೆ

ಲಂಡನ್ ನ 5 — ಭಾರತ ಸರಕಾರವು ದೊರದೇಶೀಯರ ಮೇಲೆ ಕಂದಾಯ ಹಾಕುವ ಯೋಜನೆಯಲ್ಲಿದೆ ಎಂದು ಡೈ ನಾಲ್ಡ್ಟ್ ನ್ಯೂಸ್ ಪತ್ರಿಕೆ ತಿಳಿಸುತ್ತದೆ. ಟೀ ಮತ್ತು ಶಣಬಿಗೆ ರಪ್ತು ಕಂದಾಯ ವಿಧಿಸಲು ಯೋಚಿಸಿರುವದಂತೆ.

——

ಮೃತ್ಯುಂತ ಸಂಗ್ರಹ

ಇನ್ನು ಮೇಲೆ ಲೀಗಿನ ಧ್ಯೇಯಗಳನ್ನು ಹಿಗ್ಗಿಸಿ ಅದರಲ್ಲಿ ಎಲ್ಲಾ ಅಲ್ಪ ಸಂಖ್ಯಾಕ ಪಂಗಡಗಳ ಪ್ರತಿನಿಧಿಗಳು ಸೇರಲಿಕ್ಕೆ ಅವಕಾಶವನ್ನುಂಟು ಮಾಡಲಾಗುತ್ತದೆಂದು ಸಿಂಧ ಪ್ರಾಂತದ ಕುಹ್ರೊ ಸಾಹೇಬರು ಒಂದು ಭಾಷಣದಲ್ಲಿ ಹೇಳಿದರು.

ಅಲಿಘಡ ವಿಶ್ವವಿದ್ಯಾನಿಲಯದ ಒಬ್ಬ ವಿದ್ಯಾರ್ಥಿಯು 30 ಗಂಟೆಗಳು ಅವಿಶ್ರಾಂತವಾಗಿ ಕೆಳಗಿಳಿಯದೇಲೇ ಬೈಸಿಕಲ್ ಸವಾರಿ ಮಾಡಿ ಪ್ರಪಂಚದ ಧಾಖಲೆಯನ್ನು ಮುರಿದಿರುವನು. ಇವನು ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಲು ಅಮೇರಿಕಾಕ್ಕೆ ಹೋಗಲಿರುವನು.

ಜವಹರಲಾಲರು ಗಡಿನಾಡಿನ ಪರ್ಯಟನದಲ್ಲಿ ಅಫ್ರಿಡಿ ಪಠಾಣರ ಮುಖಂಡರು ಬೈಬರ್ ಕಣಿಯನ್ನು ಪಠಾಣರಿಗೆ ಕೊಟ್ಟರೆ ಗಡಿನಾಡಿನಲ್ಲಿ ಶಾಂತಿ ಯುಂಟಾಗುವುದೆಂದು ಹೇಳಿದರಂತೆ.

ಶ್ರೀ ರಾಯಕರರು ಲಂಡನ್ನಿನಲ್ಲಿ ಈ ರೀತಿ ನುಡಿದಿರುವರು— ನೈಸರಾಯರೂ ಭಾರತೀಯರಾಗಿರಬೇಕು!

ಅಮೆರಿಕಾ ಅಣು ಶಕ್ತಿ ಸಾಮಗ್ರಿಯನ್ನೆಲ್ಲವನ್ನೂ ಅರು ಮಂದಿ ಸಚ್ಯರುಳ್ಳ ವಿಚಾರಣ ಸಮಿತಿಗೆ ಅಮೆರಿಕಾ ಅಧ್ಯಕ್ಷ ಟೂಮೆರ್ನರು ಒಪ್ಪಿಸಿದುವರು.

ಚಾಂದಪುರ ನ 6 — ಸೋಕಾಲಿಯಲ್ಲಿ ಹಿಂದೂ ಮುಸ್ಲಿಮರ ಅಣ್ಣ ತಮ್ಮಂದಿರಂತೆ ವ್ಯಾಸೆ ಮಾಡುವವರೆಗೆ ಶಾಂತಿ ಅಲ್ಲೇ ವಾಸಿಸುವುದಾಗಿ ಗಾಂಧೀಜಿಯವರು ಹೇಳಿರುವರು.

ಸೂರತ್, ನ 3 — ಭಗವತ್ ಗಿರಿಜಿ ಎಂಬ ಯೋಗಿಯು ಕಳೆದ ಬುಧವಾರ ಆರು ಅಡಿ ಉದ್ದ ಆರು ಅಡಿ ಅಗಲ ಮತ್ತು ಆರು ಅಡಿ ಆಳದ ಹೊಂದು ಹಳ್ಳದಲ್ಲಿ ಹೂಳಲ್ಪಟ್ಟು ಹಳ್ಳದ ಮೇಲೆ ಸಿಮೆಂಟು ಗಾರೆ ಮಾಡಲಾಯಿತು 96 ಗಂಟೆಗಳನಂತರ ತೆಗೆಯಲು ಅವನು ಸಜೀವದಿಂದ ಹೊರಗೆ ಬಂದುದು ಎಲ್ಲರನ್ನೂ ಆಶ್ಚರ್ಯಗೊಳಿಸಿದೆ. ಹೀಗೆ 36 ಸಾರಿ ಸಮಾಧಿಯಲ್ಲಿದ್ದನೆಂದು ಹೇಳಿದನು.

ಕಲ್ಕತ್ತಾ ನ 6 — ಲೀಗ್ ಕೌನ್ಸಿಲಿನ ಸದಸ್ಯರಾದ ಪ್ರೊ|| ಅಬ್ದುಲ್ ರಹೀಮರು ಬೀಹಾರಿನ ಅತ್ಯತ್ಯನಿಲ್ಲುವೆ ಹೋದರೆ ಕಲ್ಕತ್ತಾ ಬಂಗಾಳಾದಲ್ಲಿ ಮತ್ತೆ ಹತ್ಯಗಳು ಶುರುವಾದರೆ ತಾವೂ ಗಾಂಧೀಜಿಯಂತೆ ಉಪವಾಸ ಮಾಡುವುದಾಗಿ ಹೇಳಿದ್ದಾರೆ.

ಲಂಡನ್ ನ 7 — ನಿನ್ನೆ ದಿವಸ ಬ್ರಿಟಿಷ್ ಪಾರ್ಲಿಮೆಂಟಿನ ಪರಿಸಮಾಪ್ತಿ ಕಾಲದಲ್ಲಿ ಪ್ರಧಾನಮಂತ್ರಿಯವರು ಮಾಡಿದ ಭಾಷಣದಲ್ಲಿ ಭಾರತಕ್ಕೆ ಬೇಗ ಸ್ವಾತಂತ್ಯ ದೊರೆಯಲೆಂದಿರುವುದು

ನವದೆಹಲಿ ನ 6— ಭಾರತ ಸರಕಾರವು ಹಾಲಿ ಆರ್ಥಿಕ ಸಾಲಿನಲ್ಲಿ ಹೊರದೇಶಗಳಿಂದ 57 ಕೋಟಿ ರೂ. ಧಾನ್ಯಗಳನ್ನು ಕೊಂಡಿರುವುದಾಗಿ ಕೇಂದ್ರ ಸಭೆಯಲ್ಲಿನ ಒಂದು ಪ್ರಶ್ನೆಗೆ ಸರಕಾರಿ ಉತ್ತರವಾಯಿತು.

ಲಂಡನ್, ನ 7 — ಬ್ರಿಟಿಷ್ ಕಾನ್ಸ್ಟೇಬಲ್ಲುಗಳಿಗೆ ವಾರಕ್ಕೆ 150 ಷಿಲಿಂಗ್ ಸಂಬಳ ಕೊಡಲಾಗಿದೆ.

ಬೊಂಬಾಯಿನಲ್ಲಿ 150 ಗಲಭೆಕಾರರ ಪಸ್ತಗಿರಿಯಾಗಿದೆ.

ದೆಹಲಿಯಲ್ಲಿ ಗಲಭೆ ನಡೆದು 7 ಗಂಟೆ ಕರ್ಫ್ಯೂ ಜಾರಿಯಾಗಿದ್ದೆ.

ಪಂ|| ನೆಹರು ಪಾಟ್ನಾದಲ್ಲೇ ಇರುವರು.

ಬೊಂಬಾಯಿ ನ 7 — ಪರಿಸ್ಥಿತಿ ಉತ್ತಮ ಗೊಂಡಿಲ್ಲ. ಇರಿತಗಳೂ ಸಾವು ನೋವು ನಡೆಯುತ್ತಿದೆ. ಪೋಲೀಸರು 10 ಸಾರಿ ಗುಂಡುಹಾರಿಸಿದರು. 155 ಮಂದಿ ದಸ್ತಗಿರಿ ಮಾಡಲ್ಪಟ್ಟಿರುವರು. 77 ಮಂದಿಗೆ ಗಾಯಗೊಂಡಿರುವರು.

ನವದೆಹಲಿ ನ 7 — ಕೇಂದ್ರ ಅಸೆಂಬ್ಲಿಯಲ್ಲಿ ವಿರೋಧವಿಲ್ಲದೇ ದೇಶ ಮುಖರ ಸಗ್ರೋತ್ರ ವಿವಾಹ ಮಸೂದೆಯು ಪುಂಜೂರಾಯಿತು ಒಂದೇ ಗೋತ್ರದ ಒಂದೇ ಪ್ರವರದ ಅಥವಾ ಒಂದು ಜಾತಿಯ ಬೇರೆ ಬೇರೆ ಪಂಗಡದವರು ಮದುವೆಯಾಗಲು ಅನುಕೂಲಿಸುವುದೇ ಈ ಮಸೂದೆಯ ಆಶಯ

ಬೊಂಬಾಯಿ ನ 7 — ಬೊಂಬಾಯಿ ಸರಕಾರವು ಚಾಕು ಮತ್ತು ಆಪಾಯಕರ ಆಯುಧ ಹಿಡಿದು ತಿರುಗುವವರಿಗೆ ಚಟಿ ಏಟನ್ನು ಪುಂಡಾಟಿಕೆ ನಡೆಸುವ ಜನರು ವಾಸಿಸುವ ಕಡೆಯೆಲ್ಲಿ ಪುಂಡು ಗುಂಡಾಳು ವಿಧಿಸಲೂ 2 ಹೊಸ ಆಜ್ಞೆ ಹೊರಡಿಸಿದ್ದಾರೆ.

ನ್ಯೂಯಾರ್ಕ್ ನ 7 — ಭಾರತ ರಾಜ್ಯಾಂಗ ಸಮಿತಿ ಸದಸ್ಯರಾದ ಬೇಗಂ ಷಾನವಾಜ್ ಮತ್ತು ಮಿ|| ಹರ್ಬಾ ಇಸ್ ವಾಹಾಂಟರು ಒಂದು ಪತ್ರಿಕಾ ಸಮ್ಮೇಳನದಲ್ಲಿ ಭಾರತದ ಪ್ರಮುಖ ಜನಾಂಗಗಳಾದ ಹಿಂದೂ ಮುಸ್ಲಿಂರಲ್ಲಿ ಒಪ್ಪಂದವಾಗುವವರೆಗೆ ಭಾರತದೆಲ್ಲಿ ಶಾಂತಿ ಇರುವುದಿಲ್ಲವೆಂದು ತಿಳಿಸಿದರು. ಬ್ರಿಟಿಷರೇ ಭಾರತವನ್ನು ವಿಭಾಗಿಸಿ ಇಬ್ಬರಿಗೂ ಕೊಟ್ಟೆ ಹೋಟು ಹೋಗಲಿ ಎಂದಿರುವರು.

ತಾ॥ 11-11-46 ॥ ಶ್ರೀ॥ ಸಂ. 9

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ– ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇಗಾರತವಿಕಾರದ
ಸಂಘದ ಕಾರ್ಯದರ್ಶಿ, ದೂವರ್ಸಪುರಂ, ಶಿವಮೊಗ್ಗಾ ಜಿಲ್ಲಾ

ಶಾಂತಿ

ದಾನವೀರ ಕಾರ್ನೆಗೀ ತನ್ನ ಹಣದಿಂದ ಪ್ರಪಂಚಕ್ಕೆ ಬಹಳ ಉಪಕಾರ ಮಾಡಿದ್ದಾನೆ. ಈತನ ನಿಧಿಯಿಂದ ನ್ಯೂಯಾರ್ಕಿನಲ್ಲಿ ಒಂದು ಅಂತರರಾಷ್ಟ್ರೀಯ ಸಂಸ್ಥೆಯು ಸ್ಥಾಪಿತವಾಗಿದೆ. ರಾಜನೀತಿಕ ಪಂಗಡಗಳಿಗೆ ಸೇರಿದ ಉಚ್ಚ ತರಹದ ವಿದ್ವಾಂಸರು ಈ ಸಂಸ್ಥೆಯಲ್ಲಿದ್ದು ಅಂತರರಾಷ್ಟ್ರೀಯ ಶಾಂತಿಯ ಪ್ರಶ್ನೆಗಳ ಮೇಲೆ ವಿಮರ್ಶಿಸುತ್ತಾರೆ. ಆಗಾಗ್ಯೆ ಇವರ ಮೇಲೆ ಅಮೂಲ್ಯವಾದ ಸಾಹಿತ್ಯವನ್ನು ಪ್ರಕಟಿಸುತ್ತಾರೆ. 1942ಇಲ್ಲಿ 'ದಿ ಕಾಜೆಸ್ ಆಫ್ ದಿ ವಾರ್' ಶಾಂತಿವಿಫಲತೆಯ ಕಾರಣ ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಯುರೋಪ ದೇಶವು ಈಗಿನ ಸ್ಥಿತಿಗೆ ಹೇಗೆ ಬಂದಿತೆಂಬುದನ್ನು ರಾಜನೀತಿಕ–ಆರ್ಥಿಕ–ಆಧ್ಯಾತ್ಮಿಕ ದೃಷ್ಟಿಯಿಂದ ವಿಮರ್ಶಿಸಿದೆ. ರಾಜನೀತಿಕ ಮತ್ತು ಆರ್ಥಿಕ ಕಾರಣಗಳ ವಿಮರ್ಶೆ ಇಲ್ಲಿ ಬೇಡ. ಆಧ್ಯಾತ್ಮಿಕ ಕಾರಣಗಳ ವಿಮರ್ಶೆಯನ್ನು ನಾವು ನೋಡೋಣ– ಕಳೆದ ಇನ್ನೂರು ವರ್ಷಗಳಲ್ಲಿ ಧರ್ಮ ಒಂದು ವ್ಯಕ್ತಿಗತ ವಿಷಯವೆಂದು ತಿಳಿಯಲ್ಪಡತೊಡಗಿತು. ಕ್ರೈಸ್ತಧರ್ಮವು ತನ್ನ ಸಿದ್ಧಾಂತಗಳ ರಕ್ಷಣೆಗಿಂತ ಒಂದು ಹೊಸ ಸಿದ್ಧಾಂತವನ್ನು ಒಲಿಸಿಕೊಂಡಿತು. ಮನುಷ್ಯನು ಸ್ವತಂತ್ರನಾಗಿ ಹುಟ್ಟಿದನು. ಮತ್ತು ಸ್ವಂತ ತನ್ನ ಉನ್ನತಿ ಮಾಡಿಕೊಳ್ಳಬಲ್ಲನೆಂಬುದು ಈ ಸಿದ್ಧಾಂತ. ಈ ಸಿದ್ಧಾಂತದ ಫಲ ಸ್ವರೂಪವಾಗಿ ವ್ಯಕ್ತಿವಾದ ಪರಿವರ್ತನ ಲೋಕತಂತ್ರ ರಾಷ್ಟ್ರವಾದ ಮತ್ತು ಕೊನೆಗೆ ಆರ್ಥಿಕಬಂಧನಗಳು ಬಂದವು. ಗತಮಹಾಯುದ್ಧವು ಈ ವಿಘಟಿತಯದೇ ಪ್ರದರ್ಶನವಾಗಿದ್ದಿತು.

ಆದರಲ್ಲಿ ಪ್ರಜಾ ತಂತ್ರದ ವಿಜಯವು ಈ ಸಿದ್ಧಾಂತದಲ್ಲಿ ನಂಬಿಕೆಯನ್ನು ಬಲಪಡಿಸಿತು. ಪ್ರಜಾ ತಂತ್ರ ರಾಷ್ಟ್ರಗಳು ಅದನ್ನನುಸರಿಸಿಯೇ ಪ್ರಪಂಚವನ್ನು ಸುಧಾರಿಸುವ ನಿಶ್ಚಯ ಮಾಡಿದವು. ಈ ಪರಿಸ್ಥಿತಿಯಿಂದ ಸಮಾಜದ ಹೃದಯವು ಆಧ್ಯಾತ್ಮಿಕವಾದ ಆಧಾರ ಶೂನ್ಯವಾಯಿತು. ಮತ್ತು ಆ ಸ್ಥಾನವನ್ನು ತುಂಬಲು ತರಹ ತರಹದ ಭ್ರಮೆಗಳು ಹುಟ್ಟಿದವು, ಈ ಭ್ರಮೆಗಳನ್ನೇ ಇಂದು ಆದರ್ಶ ಅಥವಾ ವಾದ ಎಂಬ ಹೆಸರಿಟ್ಟರು. ಈ ರೀತಿಯಾಗಿ ಪ್ರಜಾತಂತ್ರ, ರಾಷ್ಟ್ರೀಯ ಸಾಮಾನ್ಯವಾದ ಫ್ಯಾಸಿಟೀವಾದ ವರ್ಗವಾದ ಮುಂತಾದುದರ ಹಿಂಗಡೆ ಜನರು ಓಡತೊಡಗಿದರು. ಆದರೆ ಪ್ರಜಾ ತಂತ್ರಕ್ಕೆ ಆಂತರಿಕವಾದ ಬಲವಿಲ್ಲದ್ದರಿಂದ ರಾಷ್ಟ್ರಗಳಿಗಾಗಲಿ ವರ್ಗಗಳಿಗಾಗಲಿ ಸಂತೋಷವುಂಟು ಮಾಡಲಾರದಾಗಿದೆ.

ಉಂಟು ಮಾಡುವುದಾದರೂ ಹೇಗೆ? ಅದು ಸ್ವಯಂ ಆಧ್ಯಾತ್ಮಿಕವಲ್ಲದಿದ್ದ ಮೇಲೆ ಇತರರಿಗೆ ಆಧ್ಯಾತ್ಮಿಕ ಬಲವಿಲ್ಲದೆ ಸಂತೋಷವಾದರೂ ಹೇಗೆ? ಹೀಗಿರಲು ಆಧ್ಯಾತ್ಮಿಕ ಬಲವನ್ನು ಸಂಪಾದಿಸುವ ಅಗತ್ಯವಿದೆ. ಯಾಕೆಂದರೆ ಅದರಿಂದಲೇ ಜೀವನವು ಜೀವನವೆನಿಸುತ್ತದೆ. ಈ ಸಾಯೀ ಧರ್ಮವು ಒಳಗೊಳಗಿನ ಜಗಳದಿಂದಲೂ, ಹೊರಗಿನ ಧಾಳಿಯಿಂದಲೂ ತನ್ನನ್ನು ರಕ್ಷಿಸಿಕೊಳ್ಳಲಾರದಾಯಿತು. ಹೀಗಿರಲು ಅದು ಇತರರಿಗೆ ಸಂತೋಷವನ್ನುಂಟುಮಾಡಲು ಹೇಗೆ ಸಮರ್ಥವಾದೀತು?

ಹೀಗೆ ಆ ಪುಸ್ತಕವು ವಿಮರ್ಶಿಸಿ, ಕೊನೇದಾಗಿ 'ಆಧುನಿಕ ಜಗತ್ತಿನ ದೊಡ್ಡ ರೋಗವೆಂದರೆ ಸತ್ಯದಲ್ಲಿ ವಾಸ್ತವಿಕವಾದ ನಂಬಿಕೆ ಇಡದಿರುವುದೇ ಆಗಿದೆ' ಎಂಬ ನಿರ್ಣಯವನ್ನು ಪ್ರಕಟಿಸಿದೆ.

ಇದರ ಮೇಲೆ ಈಗಿನ ಮುಂದಾಳುಗಳು ಆಲೋಚಿಸಬೇಕು. ಪಾಶ್ಚಾತ್ಯ ದೇಶಗಳಲ್ಲಿನ ಹೊಸಹೊಸ 'ವಾದ'ಗಳನ್ನು ಅನುಕರಿಸುವ ಗೋಜಿಗೆ ಹೋಗಬಾರದು. ಯಾಕೆಂದರೆ, ಆ 'ವಾದ'ಗಳ ನಿಜಸ್ಥಿತಿಯನ್ನು ಪೂರ್ಣ ಅನುಭವಿಸಿ

ಗಂಡು ಕರ್ನಾಟಕ ಪ್ರಾಂತ್ಯದಿಂದಲೂ ಮಹನೀಯರು ಪೀಡಿತರಿಗೆ ಉದಾರ ಸಹಾಯ ನೀಡಬೇಕಾಗಿ ವಿನಂತಿ.

ಬಂಗಾಳಾ ನಿಧಿಗೆ ಸಹಾಯಮಾಡಿರಿ

ಸಿದ್ಧಪುರ ತಾ॥ 30-10-46

ಕಾರ್ತೀಕ ಶುದ್ಧ ಬುಧವಾರದ ದಿನ ಸಂಜೆ ಸಿದ್ಧಪುರದ ಹಿಂದು ನಾಗರಿಕರ ಒಂದು ಸಭೆಯು ಶ್ರೀ ದ್ವಾರಕಾ ಪೀಠಾಧೀಶ್ವರ ಶ್ರೀ ಜಗದ್ಗುರು ಶಂಕರಾಚಾರ್ಯ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಪೂರ್ವ ಬಂಗಾಳಾದಲ್ಲಿ ಆದರಲ್ಲೂ ಹೆಚ್ಚಾಗಿ ನೋಆಖಿಲಿ, ಟೀಪೇರಾ, ಚಾಂದಪುರ ಮುಂತಾದ ಊರುಗಳಲ್ಲಿ ಹಿಂದೂಜನರ ಮೇಲೆ ಮುಸಲ್ಮಾನರಿಂದ ನಡೆಸಲ್ಪಟ್ಟ ಅತ್ಯಾಚಾರಗಳ ವಿಷಯದಲ್ಲಿ ಚರ್ಚಿಸಲು ನಡೆಯಿತು. ಅನೇಕ ವಿದ್ವಾಂಸರ ಮತ್ತು ಶ್ರೀ ಜಗದ್ಗುರುಗಳವರ ಉಪನ್ಯಾಸಗಳಾಗಿ ಕೆಳಗಿನ ಮೂರು ತರಾವುಗಳು ಪಾಸಾದವು.

ಅ. ಭಾ. ಧರ್ಮಸಂಘಾಧ್ಯಕ್ಷರಾದ ಶ್ರೀ ಜಗದ್ಗುರುಗಳಿಂದ ಸ್ಥಾಪಿತವಾದ 'ಸನ್ಮಾರ್ಗ ಬಂಗಾಳಾ ಪೀಡಿತ ಹಿಂದೂ ಸಹಾಯ ನಿಧಿ' ಗೆ ಹಣ ಕೂಡಿಸಲು ಒಂದು ಕಮಿಟಿಯು ಏರ್ಪಟ್ಟು ಭರದಿಂದ ಹಣಕೂಡಿಸುತ್ತಿದೆ– ಈ ನಿಧಿಗೆ ಶ್ರೀ ಜಗದ್ಗುರುಗಳವರು ಭೂಮಿಕಾ ರೂಪವಾಗಿ ಒಂದು ಸಾವಿರ ರೂಪಾಯಿ ಕೊಟ್ಟಿದ್ದಾರೆ.

— ತರಾವುಗಳು —

೧ ಪೂರ್ವ ಬಂಗಾಳಾದಲ್ಲಿ ಮುಸ್ಲಿಮ್ ಲೀಗಿನ ಸಹಾನುಭೂತಿಯಿಂದ ಮುಸಲ್ಮಾನ ಪುಂಡರು ನಡೆಸಿದ ಲೂಟಿ ಬಲಾತ್ಕಾರ, ಧರ್ಮಾಂತರ, ಶೀಲಭಂಗಾದಿ ಪಾಪಾಚಾರಗಳನ್ನು ಈ ಸಭೆಯು ರೋಷದಿಂದ ಧಿಕ್ಕರಿಸುತ್ತದೆ, ಮತ್ತು ಪೀಡಿತರಾದ ಹಿಂದೂಗಳಿಗೆ ಸಹಾನುಭೂತಿ ತೋರಿಸುತ್ತದೆ. ಜೊತೆಗೇ ವೈಸಾಯಿ, ಬಂಗಾಳಾಗವರ್ನರ್ ಮತ್ತು ರಾಷ್ಟ್ರೀಯ ಸರಕಾರವು ಮೇಲಿನ ಅತ್ಯಾಚಾರಗಳನ್ನು ತೀಕ್ಷ್ಣಣ ರೀತಿಯಿಂದ ಸಲ್ಲಿಸಬೇಕೆಂದೂ ತಪ್ಪುಗಾರರನ್ನು ಶಿಕ್ಷಿಸಬೇಕೆಂದೂ ವಿನಂತಿಸುತ್ತದೆ.

೨ ಈ ಸಭೆಯು ಮುಸ್ಲಿಂ ಪುಂಡರ ದುಷ್ಕೃತ್ಯಗಳಿಂದ ಕಷ್ಟಕ್ಕೀಡಾದ ಹಿಂದೂಗಳಿಗೆ ಸಹಾನುಭೂತಿ ತೋರಿಸುತ್ತದೆ, ಮತ್ತು ಅಂಥವರನ್ನು ಪುಂಡರ ಕೈಯಿಂದ ಬಿಡಿಸಲು ಕೂಡ್ಲೆ ಎಲಾ ಹಿಂದೂಜನರೂ ಮನಃಪೂರ್ವಕವಾಗಿ ತನು ಮನ ಧನದಿಂದ ಸಹಾಯ ಮಾಡಬೇಕಾಗಿ ವಿನಂತಿಸುತ್ತದೆ.

೩ ಬಲಾತ್ಕಾರದಿಂದ ಮತಾಂತರಗಾದವರನ್ನು ಉಚಿತ ಪ್ರಾಯಶ್ಚಿತ್ತದಿಂದ ಶುದ್ಧಿ ಮಾಡಿ ಹಿಂದೂಸಮಾಜದಲ್ಲಿ ತೆಗೆದುಕೊಳ್ಳಬೇಕೆಂದು ಸಾಗ್ರಹವಾಗಿ ಈ ಸಭೆಯು ಕೋರುತ್ತದೆ.

ವಿ. ಸೂ.— ಮೇಲಿನ ವಿವರಣೆಯಿಂದ ಪ್ರಕೃತ ಸ್ಥಿತಿಯನ್ನು ಮನ

ಹಿಂದೂಗಳನ್ನು ರಕ್ಷಿಸಿರಿ

ಸಿದ್ಧಪುರ 21-10-46

ಅ. ಭಾ॥ ಧರ್ಮ ಸಂಘದ ಅಧ್ಯಕ್ಷರಾದ ಶ್ರೀ ದ್ವಾರಕಾ ಜಗದ್ಗುರುಗಳವರು ಶ್ರೀ ವೈಸರಾಯರಿಗೂ ಬಂಗಾಳಾ ಗವರ್ನರಿಗೂ ಈ ರೀತಿ ತಂತೀ ಕಳುಹಿಸಿದ್ದಾರೆ— ಸಖಾಲ ಮತ್ತು ಪೂರ್ವ ಬಂಗಾಳಾದ ಹೃದಯ ವಿದ್ರಾವಕ ದರ್ದಿಗೆ ಅತ್ಯಾಚಾರಗಳ ಸಮಾಚಾರಗಳನ್ನು ಕೇಳಿ ಅಪರಿಮಿತ ಖೇದವಾಗಿದೆ. ಕೂಡಲೇ ದಂಗೇ ಖೋರ ಪುಂಡರ ಅಮಾನುಷಿಕ ಅತ್ಯಾಚಾರಗಳಿಂದ ಹಿಂದೂಗಳನ್ನು ರಕ್ಷಿಸಿರಿ. ತಡ ಮಾಡಿದರೆ ಪ್ರಮಾದವಾದೀತು.

ಈ ತಂತಿಯ ಕಾಪಿಗಳನ್ನು ಮುಖ್ಯ ಮಂತ್ರಿ ಜವಾಹರ್‌ಲಾಲ್ ನೆಹರೂ ಮಂತ್ರಿಗಳಾದ ಸ॥ ವಲ್ಲಭಾಯಿ ಪಟೇಲ್, ರಾಜಗೋಪಾಲಾಚಾರಿ ಭಾಬೂ ರಾಜೇಂದ್ರ ಪ್ರಸಾದ ಶರತ್‌ಚಂದ್ರ ಬೋಸ್ ಸ॥ ಬಲದೇವಸಿಂಗ್ ಮುಂತಾದವರುಗಳಿಗೂ ಕಳಿಸಿರುವರು.

ಮತ್ತು ಈ ಸಮಾಚಾರವನ್ನು ಪ್ರಕಟನೆಗಾಗಿ ಹಿಂದೂಸ್ಥಾನದ ಎಲ್ಲಾ ಮುಖ್ಯ ಮುಖ್ಯ ಪತ್ರಿಕೆಗಳಿಗೂ ತಂತೀ ಮೂಲ್ಕ ಕಳಿಸಲಾಗಿದೆ.

ಜಗದ್ಗುರುಗಳವರ ಪ್ರತಿಭಟನೆ

ಸ್ವಂ. ಸು. ತಂತಿ] ಸಿದ್ಧಪುರ ನ 5

ಅಖಿಲ ಭಾರತ ಧರ್ಮ ಸಂಘದ ಅಧ್ಯಕ್ಷರಾದ ಶ್ರೀ ದ್ವಾರಕಾ ಪೀಠದ ಜಗದ್ಗುರು ಶಂಕರಾಚಾರ್ಯ ಸ್ವಾಮಿ ಶ್ರೀ ಅಭಿನವ ಸಚ್ಚಿದಾನಂದ ತೀರ್ಥ ಮಹಾರಾಜರು ಸಂಯುಕ್ತ ಪ್ರಾಂತ್ಯದ ಗೌರ್ನರು ಮಹಾ ಪ್ರಧಾನರು ಮತ್ತು ಮಂತ್ರಿಗಳಿಗೆ ತಂತೀ ಕಳುಹಿಸಿ ಅಲಹಾಬಾದಿನಲ್ಲಿ ವಿಸರ್ಜಿಸಲಾಗಿದ್ದ ಸಂಕೀರ್ತನ ಸಮ್ಮೇಳನವನ್ನು ಪ್ರತಿಬಂಧಿಸಿ ಸಮ್ಮೇಳನವೇರ್ಪಡಿಸಿದ್ದ ಬ್ರಹ್ಮಚಾರಿ ಪಾಥಿದತ್‌ಜೀ ಮತ್ತು ಇತರ ಸಾಧುಗಳನ್ನು ದಸ್ತಗಿರಿ ಮಾಡಿರುವುದನ್ನು ತೀವ್ರವಾಗಿ ಖಂಡಿಸಿ ಕೂಡಲೇ ಬ್ರಹ್ಮಚಾರಿ ಮತ್ತು ಇತರರನ್ನು ಬಿಡುಗಡೆ ಮಾಡಬೇಕೆಂದಿರುವರು.

ಅದೇ ಪಾಶ್ಚಾತ್ಯ ವಿದ್ವಾಂಸರು ಅದನ್ನು ಖಂಡಿಸುವುದನ್ನು ಕಣ್ಣುಬಿಟ್ಟು ನೋಡಿ ಎಲ್ಲರೂ ಬುದ್ಧಿ ಕಲಿಯಬೇಕು.

Car for Sale

1934 Model Morris Saloon in good condition with new battery and Brand New Tyres. Rs. 3000 or nearest offer. Apply in person or write to the undersigned immediately.

K. G. KATWEY

Municipal Engineer, Mysore City Municipality

॥ವಂದೇ ಮಾತರಂ॥

ಶ್ರೇಷ್ಠವಾದ

ರಾಜಪುರಿ ಹೊಗೇಸೊಪ್ಪಿನಿಂದ

— ತಯಾರಿಸಲ್ಪಟ್ಟ —

ಕಾಂಗ್ರೆಸ್

(ರಿಜಿಸ್ಟರ್ಡ್)

ಮಂಗಳೂರು

ಬೀಡಿಗಳು

ಜಿ. ಎಸ್. ಟೊಬ್ಯಾಕೊ ವರ್ಕ್ಸ್

ಬಸ್ ಟರ್ಮಿನಸ್, ಮೈಸೂರು.

ಅಕ್ಕರ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ಚಿತ್ರ — ಅಲ್ಲೀರಿಕಾದಿಂದ ಆಹಾರ ಇತರ ದೇಶಗಳಿಗೆ ಸರಬರಾಜಾಗುತ್ತಿರುವುದು.



Talk-a-Tone

Premier Film Mag. of S. India
Local Agent— D. Mahaadev
c/o Opera Talkies,, Myso

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--12--0

Edited, Printed and Published by M. S Krishna Rao at the Satyavadi Press Chamaraj Agraahr Mysore.

At Opera

3rd Houseful Week

Sri Murugan

ಶ್ರೀ ಮುರುಗನ್

ಹೊನ್ನಪ್ಪ ಭಾಗವತರ್, ಕಾಳಿ ಎಸ್ ರತ್ನ, ಮಾಲತಿ, ಜೀವರತ್ನ, ಯೋಗ ಮಂಗಳಂ ಮುಂತಾದವರು

ಪಾತ್ರವಹಿಸಿರುವರು (ತಮಿಳು ಚಿತ್ರ)

At Ranjit—— 2nd Glorious Week

ಕುರ್ಸಿದ' — ಚಂದ್ರಮೋರ್ಕ

ಪಾತ್ರವಹಿಸಿರುವ

ಮುಮ್ತಾಜ್ ಮಹಲ್

Mumtaz Mahal

ಪ್ರತಿ ದಿನ 3 ಆಟಗಳು .... ಅಮೋಘ ಹಿಂದಿ ಚಿತ್ರ

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ಘಾಸನೆಯನ್ನು ಕಲ್ಪಿಸುವುದಲ್ಲದ್ದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶೂರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪೂಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಔತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲ್ಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್ ಮಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಬಿ. ಕೆ. ಮೊಹಲ್ಲಾ